**ಸಾಕ್ಷಿಯನ್ನು ದಿನಾಂಕ 17.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ಡಿಸೆಂಬರ್ 2022ರಲ್ಲಿ ನಾನು ಆರೋಪಿಗೆ ರೂ.4,00,000/-ನಿಜ ಅಲ್ಲವಾ ಎಂದರೆ ಹೌದು. ಆಗ ನಾನು ಭದ್ರತೆಗಾಗಿ ಎರಡು ಚೆಕ್ ಗಳನ್ನು ಪಡೆದಿದ್ದೆ ಎಂದರೆ ಸರಿಯಲ್ಲ, ಮೂರು ತಿಂಗಳ ಒಳಗೆ ಸಾಲವನ್ನು ಮರುಪಾವತಿಸುತ್ತೇವೆ ಎಂದು ತಿಳಿಸಿದ್ದರು. ಆರೋಪಿಯ ಹೆಂಡತಿ ತನ್ನ ತವರು ಮನೆ ಆಸ್ತಿಯನ್ನು ಮಾರಾಟಕ್ಕಿಟ್ಟಿದ್ದರು, ಅದು ಮಾರಾಟವಾದರೆ ನಿಮ್ಮ ಹಣ ವಾಪಸ್ಸು ಕೊಡುತ್ತೇವೆ ಎಂದು ತಿಳಿಸಿದ್ದರು ಎಂದರೆ ಹೌದು. ದಿನಾಂಕಃ18.01.2023ರಂದು ಆರೋಪಿಯ ಹೆಂಡತಿ ತನ್ನ ತಂದೆಯ ಹೆಸರಿನಲ್ಲಿದ್ದಂತಹ ಆಸ್ತಿಯನ್ನು ಮಾರಾಟ ಮಾಡಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ನನಗೆ ಯಾವುದೇ ಹಣ ಕೊಟ್ಟಿಲ್ಲ. ದಿನಾಂಕಃ18.01.2023ರ ನಂತರ ಆರೋಪಿ ಮತ್ತು ಆತನ ಹೆಂಡತಿ ಬಂದು ನನಗೆ ಹಣವನ್ನು ಕೊಟ್ಟರು ಎಂದರೆ ಸರಿಯಲ್ಲ.

5. ಹಣವನ್ನು ಕೊಟ್ಟಾಗ ಭದ್ರತೆಗಾಗಿ ಕೊಟ್ಟಿದ್ದಂತಹ ಎರಡು ಚೆಕ್ ಗಳನ್ನು ವಾಪಸ್ಸು ಕೊಡಬೇಕೆಂದು ಬೇಡಿಕೆ ಇಟ್ಟಿದ್ದರು, ಎಲ್ಲೋ ಇಟ್ಟಿದ್ದೇನೆ ಹುಡುಕಿಕೊಡುತ್ತೇನೆ ಎಂದು ಹೇಳಿ ಸದರಿ ಚೆಕ್ ಗಳನ್ನು ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. 2020ರಲ್ಲಿ ಭದ್ರತೆಗಾಗಿ ಕೊಟ್ಟಿರುವ ಚೆಕ್ ಗಳನ್ನು ನಾನು ದುರುಪಯೋಗಪಡಿಸಿಕೊಂಡು ದಿನಾಂಕಃ 05.02.2024ರಂದು ಹೆಚ್ಚಿನ ದುಡ್ಡಿಗಾಗಿ ಭದ್ರತೆಗಾಗಿ ಕೊಟ್ಟಿರುವಂತಹ ಚೆಕ್ ಗಳನ್ನು ನಗದೀಕರಣಕ್ಕಾಗಿ ಹಾಕಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ01.03.2024ರಂದು ಆರೋಪಿಯು ನಾನು ಕೊಟ್ಟಿರುವಂತಹ ನೋಟೀಸಿಗೆ ಪ್ರತಿ ಉತ್ತರವನ್ನು ನೀಡಿ ಯಾವುದೇ ಸಾಲದ ಹಣ ಬಾಕಿ ಇಲ್ಲವೆಂದು ತಿಳಿಸಿರುವುದಕ್ಕೆ ಯಾವುದಾದರೂ ಪ್ರತಿ ಉತ್ತರ ನೀವು ನೀಡಿರುತ್ತೀರಾ ಎಂಬ ಪ್ರಶ್ನೆಗೆ ನನಗೆ ಯಾವುದೇ ಪ್ರತಿ ಉತ್ತರದ ನೋಟೀಸು ಬಂದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ಪ್ರತಿ ಉತ್ತರದ ನೋಟೀಸನ್ನು ನೀಡಿದ್ದರೂ ಸಹ ಅವರ ಮೇಲೆ ಸುಳ್ಳು ಆರೋಪ ಮಾಡಿ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

6. ನಾನು ನೀಡಿರುವಂತಹ ನೋಟೀಸಿಗೆ ಆರೋಪಿ ಕೊಟ್ಟಿರುವಂತಹ ಪ್ರತಿ ಉತ್ತರವನ್ನು ನಮ್ಮ ವಕೀಲರು ನನಗೆ ತಿಳಿಸಿದರು. ನಾನಾಗಲೀ ಅಥವಾ ನಮ್ಮ ವಕೀಲರಾಗಲೀ ಸದರಿ ನೋಟೀಸಿನ ಪ್ರತಿ ಉತ್ತರಕ್ಕೆ ಯಾವುದೇ ಪ್ರತಿ ಉತ್ತರವನ್ನು ಕೊಟ್ಟಿಲ್ಲ. ಆರೋಪಿಯು ಯಾವುದೇ ಸಾಲದ ಬಾಕಿಯನ್ನು ಕೊಡಬೇಕಾಗದಿದ್ದರೂ ಸಹ ಭದ್ರತೆಗಾಗಿ ನೀಡಿರುವಂತಹ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**